# ಕತ್ತಲ ಅಂಗಳದಲ್ಲಿ 'ಚಂದ್ರೋದಯ'







■ ವಿಕ್ರಂ ಕಾಂತಿಕೆರೆ

ಚಿತ್ರಗಳು: ಬನೇಶ ಕುಲಕರ್ಣಿ

ವಾಟ್ ಎ ಶಾಟ್...ದ್ಯಾಟ್ ವಾಸ್ ಹಾರ್ಡ್ ಹಿಟ್ ಆನ್ ಫ್ರಂಟ್ ಫುಟ್. ದ ಬಾಲ್ ಗೋಸ್ ಟವರ್ಡ್ಸ್ ಲಾಂಗ್ ಆನ್ ಬೌಂಡರಿ...

ವ್ಹಾ! ದ್ಯಾಟ್ ವಾಸ್ ಗುಡ್ ಬಾಲ್. ದ ಬಾಲ್ ಪಿಚ್‌ಡ್ ಔಟ್‌ಸೈಡ್ ದ ಆಫ್ ಸ್ಟಂಪ್ ಆ್ಯಂಡ್ ದ ಬ್ಯಾಟ್ಸಮನ್ ಕಂಪ್ಲೀಟ್‌ಲೀ ಬೀಟನ್...

ವ್ಹಾ! ಗುಡ್ ಶಾಟ್. ದ ಬ್ಯಾಟ್ಸಮನ್ ಫ್ಲಿಕ್‌ಡ್ ದ ಬಾಲ್ ಟವರ್ಡ್ಸ್ ಫೈನ್‌ಲೆಗ್ ಆ್ಯಂಡ್ ದೇರ್ ಈಸ್ ನೋ ಫೀಲ್ಡರ್ ಅಟ್ ದ ಡೀಪ್. ಬಾಲ್ ಕ್ರಾಸಸ್ ದ ಬೌಂಡರಿ ಲೈನ್...

ಕತ್ತಲ ಜಗತ್ತಿನಲ್ಲಿ ಕ್ರಿಕೆಟ್‌ನ ಝಲಕ್ ಹರಿಸುವ ಅಂಧರ ಕ್ರಿಕೆಟ್‌ನಲ್ಲಿ ಇಂಥ ಸುಂದರ ಕಾಮೆಂಟರಿ ಕೇಳಿ ಬಂದಾಗ ಕಾಮೆಂಟರಿ ಹೇಳುವವರು ದೃಷ್ಟಿ ದೋಷವಿಲ್ಲದ ಕ್ರಿಕೆಟ್ ಪರಿಣಿತ ಎಂದು ತಿಳಿದುಕೊಂಡವರಿಗೆ ಅಚ್ಚರಿ ಮಾತ್ರವಲ್ಲ, ರೋಮಾಂಚನವೂ ಕಾದಿತ್ತು. ಹುಬ್ಬಳ್ಳಿ–ಗದಗ–ಧಾರವಾಡದಲ್ಲಿ ಈಚೆಗೆ ನಡೆದ ಬೆಂಗಳೂರಿನ ಸಮರ್ಥನಂ ಸಂಸ್ಥೆ ಹಾಗೂ ಹುಬ್ಬಳ್ಳಿ–ಧಾರವಾಡ–ಗದಗ ಲಯನ್ಸ್ ಕ್ಲಬ್‌ಗಳ ಆಶ್ರಯದ ಕರ್ನಾಟಕ–ಕೇರಳ ನಡುವಣ 'ದೃಷ್ಟಿ ಕಪ್' ಅಂಧರ ಟ್ವೆಂಟಿ–20 ಕ್ರಿಕೆಟ್ ಸರಣಿಯ ಪಂದ್ಯಗಳನ್ನು ವೀಕ್ಷಿಸಿದ ಪ್ರೇಕ್ಷಕರಲ್ಲಿ ಅನೇಕರು ಸ್ಕೋರರ್ ಹತ್ತಿರ ಕುಳಿತು ಕಾಮೆಂಟರಿಯ ರಸದೂಟ ನೀಡಿದ ಚಂದ್ರಕಾಂತ ಸಿಂಗ್ ಅವರನ್ನು ಕಂಡಿದ್ದಾರೆ, ಅಂತರ ದೃಷ್ಟಿಯಿಂದಲೇ ಆಟ 'ನೋಡಿ' ಅದರ ರಸಕ್ಷಣಗಳಿಗೆ ಮಸಾಲೆ ಸೇರಿಸಿ ಪ್ರೇಕ್ಷಕರಿಗೆ ತಲುಪಿಸುವ ಅವರ ಅದ್ಭುತ ಶಕ್ತಿಗೆ ಮಾರು ಹೋಗಿದ್ದಾರೆ. ಚಂದ್ರಕಾಂತ ಸುಮ್ಮನಾದಾಗ 'ಕಾಮೆಂಟರಿ ಬೇಕು' ಎಂದು ಕೂಗಾಡಿದ್ದಾರೆ.

ಚಂದ್ರಕಾಂತ ಕರ್ನಾಟಕ ಅಂಧರ ಕ್ರಿಕೆಟ್ ತಂಡದ ಸದಸ್ಯ. ತಂಡದ ಆಲ್‌ರೌಂಡರ್ ಆಗಿರುವ ಇವರಿಗೆ ಆಟದೊಂದಿಗೆ ವೀಕ್ಷಕ ವಿವರಣೆ ಪ್ರಮುಖ ಹವ್ಯಾಸ. ಆಟ ನೋಡಲು ಸಾಧ್ಯವಾಗದಿದ್ದರೂ ಶಬ್ದವನ್ನು ಕೇಳಿ ಅಂಗಣದಲ್ಲಿ ನಡೆದದ್ದನ್ನೆಲ್ಲ ಸರಿಯಾಗಿ ಹೇಳಬಲ್ಲರು. ಕ್ರಿಕೆಟ್‌ನ ತಾಂತ್ರಿಕ ಅಂಶಗಳನ್ನು ಬಲ್ಲವರಾದ್ದರಿಂದ ಅವರ ಕಾಮೆಂಟರಿ ಆಕರ್ಷಕವಾಗಿರುತ್ತದೆ. ಮೈದಾನದಲ್ಲಿ ನಡೆಯುವ ಪ್ರಕ್ರಿಯೆಗಳನ್ನು ನೋಡಿ ಚಂದ್ರಕಾಂತ ಅವರಿಗೆ ದಾಟಿಸಲು ದೃಷ್ಟಿ ಇರುವವರು ಹತ್ತಿರ ಕುಳಿತರಂತೂ ಅವರಿಗೆ ಶತಕ ಬಾರಿಸಿದಷ್ಟು ಸಂತಸ.

ಹುಟ್ಟಿದ್ದು ಉತ್ತರ ಪ್ರದೇಶದ ಅಲಹಾಬಾದ್‌ನಲ್ಲಿ, ಬೆಳೆದದ್ದು ಬೆಂಗಳೂರಿನಲ್ಲಿ. 'ಅಂಧಕಾರದ'ಲ್ಲೇ ಹುಟ್ಟಿದ ಅವರಿಗೀಗ 25 ವರ್ಷ ವಯಸ್ಸು. ಅಂಧರ ಕ್ಷೇಮಕ್ಕಾಗಿ ದುಡಿಯುತ್ತಿರುವ ಸಮರ್ಥನಂ ಸಂಸ್ಥೆಯ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ರಿಸೆಪ್ಷನಿಸ್ಟ್.

ಚಂದ್ರಕಾಂತ ಅವರ ತಂದೆ ಚಂದ್ರಭಾನ್ ಸಿಂಗ್, ಬೆಂಗಳೂರಿನಲ್ಲಿ ಪಾನ್ ವ್ಯಾಪಾರ ಮಾಡುತ್ತಿದ್ದಾರೆ. ತಾಯಿ–ಅಮರಾವತಿ ದೇವಿ. ಸಣ್ಣ ವಯಸ್ಸಿನಲ್ಲಿ ಇವರು ಚಂದ್ರಕಾಂತನನ್ನು ಕರೆದುಕೊಂಡು ಮುಂಬೈಗೆ ಹೋಗಿದ್ದರು. ಅಲ್ಲಿಂದ ಬೆಂಗಳೂರಿಗೆ ಆಗಮಿಸಿ ಅಕಾಡೆಮಿ ಫಾರ್ ದಿ ಬ್ಲೈಂಡ್‌ನ ರಮಣ ಮಹರ್ಷಿ ಅಂಧರ ಶಾಲೆಗೆ ಸೇರಿಸಿದರು. ಎಸ್‌ಎಸ್‌ಎಲ್‌ಸಿಯಲ್ಲಿ 70 ಶೇಕಡಾ ಅಂಕಗಳೊಂದಿಗೆ ಪಾಸಾದ ಚಂದ್ರಕಾಂತ ಅವರ ಬದುಕಿಗೆ ಸರಿಯಾದ ದಾರಿ ತೋರಿಸಿದ್ದು ಸಮರ್ಥನಂ ಸಂಸ್ಥೆ. ಉಚಿತ ಶಿಕ್ಷಣ ಮತ್ತಿತರ ಸೌಲಭ್ಯ ಕಲ್ಪಿಸಿದ ಸಂಸ್ಥೆಯ ಆಶ್ರಯದಲ್ಲೇ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಬಿಎ ಪಾಸು ಮಾಡಿದರು.

ಹೃದಯಾಘಾತದಿಂದ ಮೃತನಾದ ವಿಶಾಲ್ ಎಂಬ ಆಟಗಾರನಿಂದಾಗಿ ಚಂದ್ರಕಾಂತಗೆ ಕ್ರಿಕೆಟ್‌ನಲ್ಲಿ ಆಸಕ್ತಿ ಮೂಡಿತು. ಉತ್ತಮ ಫೀಲ್ಡರ್ ಆಗಿ ತಂಡಕ್ಕೆ ಸೇರಿದ ಅವರು ಕಳೆದ ಎಂಟು ವರ್ಷಗಳಿಂದ ಆಲ್‌ರೌಂಡ್ ಆಟಗಾರ. 2006ರಲ್ಲಿ ನಡೆದ ದಕ್ಷಿಣ ವಲಯ ಅಂಧರ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಕರ್ನಾಟಕದ ಗೆಲುವಿನಲ್ಲಿ ಇವರ ಪಾತ್ರವೂ ಮಹತ್ವದ್ದು. ಅಂದು ಚಂದ್ರಕಾಂತ ಅಜೇಯ 46 ರನ್ ಗಳಿಸಿದ್ದಲ್ಲದೆ ಒಂದೇ ಓವರ್‌ನಲ್ಲಿ 9 ರನ್ ನೀಡಿ ಎದುರಾಳಿಗಳ ಮೂವರನ್ನು ಪೆವಿಲಿಯನ್‌ಗೆ ಅಟ್ಟಿದ್ದರು. ಇವೆರಡು ಅವರ ಜೀವನ ಶ್ರೇಷ್ಠ ಸಾಧನೆಯೂ ಹೌದು.

'ದೃಷ್ಟಿ ಕಪ್'ನ ಮೂರು ಪಂದ್ಯಗಳ ಪೈಕಿ ಎರಡು ಪಂದ್ಯಗಳಲ್ಲಷ್ಟೇ ಚಂದ್ರಕಾಂತ ಬ್ಯಾಟಿಂಗ್ ಮಾಡಿದ್ದರು. ಗಳಿಸಿದ ಒಟ್ಟು ರನ್ ಕೇವಲ ಮೂರು ಅಷ್ಟೆ. ಆದರೆ ತಂಡ ಬ್ಯಾಟಿಂಗ್ ಮಾಡುವಾಗ ಅಥವಾ ಅಂತಿಮ ಹನ್ನೊಂದರಲ್ಲಿ ಸ್ಥಾನ ಪಡೆಯದೆ ಕುಳಿತಿರುವಾಗ ಚಂದ್ರಕಾಂತ ಕಾಮೆಂಟರಿಯೊಂದಿಗೆ 'ಆಟವಾಡಿ' ಖುಷಿಪಟ್ಟುಕೊಳ್ಳುತ್ತಾರೆ.

'ಅಂತರರಾಷ್ಟ್ರೀಯ ಪಂದ್ಯಗಳ ಕಾಮೆಂಟರಿಯನ್ನು ಟಿವಿಯಲ್ಲಿ ಅಥವಾ ರೇಡಿಯೋದಲ್ಲಿ ಕೇಳುವುದು ಇಷ್ಟ. ಹಾಗೆ ಕೇಳಿಯೇ ಕಾಮೆಂಟರಿ ಹೇಳುವುದನ್ನು ಕಲಿತೆ. ಚೆಂಡಿನ ಸದ್ದು ಕೇಳಿದರೆ ಪಿಚ್ ಮೇಲೆ ನಡೆದಿರುವುದೇನು ಎಂಬುದನ್ನು ಊಹಿಸಬಲ್ಲೆ. ಹೊಡೆತದ ಸದ್ದು ಕೇಳಿ ಚೆಂಡು ಯಾವ ಕಡೆಗೆ ಹೋಗಿರಬಹುದು, ಎಷ್ಟು ರನ್ ಓಡಿರಬಹುದು ಎಂಬುದನ್ನು 'ಲೆಕ್ಕ' ಹಾಕಬಲ್ಲೆ. ಹೀಗೆ ಊಹಿಸಿ ಹೇಳಿದ್ದು ಅನೇಕ ಸಂದರ್ಭದಲ್ಲಿ ಸರಿಯೇ ಆಗಿರುತ್ತದೆ. ಸ್ಕೋರರ್ ಹತ್ತಿರವೇ ಇರುವುದರಿಂದ ತಪ್ಪಾಗಿದ್ದರೆ ಅವರು ಸರಿಪಡಿಸುತ್ತಾರೆ' ಎಂದು ಹೇಳುವ ಚಂದ್ರಕಾಂತ ಅಂಧರ ಕ್ರಿಕೆಟ್ ಕಾಮೆಂಟರಿಗೆ ಭರವಸೆಯ ಬೆಳಕಾಗುವ ಹಾದಿಯಲ್ಲಿದ್ದಾರೆ.